# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 479

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 15.09.2022

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಆರ್.ಎಂ.ಪಿ–2015 ರಲ್ಲಿ 60ಅಡಿ ರಸ್ತೆಯೆಂದು ಗುರುತಿಸಲಾಗಿರುವ ಯಲಹಂಕ–ಕೋಗಿಲು ರಸ್ತೆಯಿಂದ ಪ್ರಕೃತಿ ನಗರ, ಜಯಸೂರ್ಯನಗರ 1ನೇ ಹಂತ, 1ನೇ ಹಂತ ಹಾಗೂ 3–ಎ ಹಂತಗಳ ಮಾರ್ಗವಾಗಿ ಸಂಪಿಗೆಹಳ್ಳಿ ಸೇರುವ ರಸ್ತೆಯನ್ನು ಅಭಿವೃದ್ಧಿ ಮಾಡದಿರಲು ಆಗಿರುವ ದೀರ್ಘ ವಿಳಂಬಕ್ಕೆ ಕಾರಣಗಳೇನು; (ಗುರುತಿಸಿರುವ ರಸ್ತೆಯ ನಕ್ಷೆಯ ಪ್ರತಿಯನ್ನು ನೀಡುವುದು) | ಆರ್.ಎಂ.ಪಿ–2015 ರಲ್ಲಿ 60 ಅಡಿ ರಸ್ತೆಯೆಂದು ಗುರುತಿಸಲಾಗಿರುವ ಯಲಹಂಕ ಕೋಗಿಲು ರಸ್ತೆಯಿಂದ ಪ್ರಕೃತಿನಗರ, ಜಯಸೂರ್ಯನಗರ 1ನೇ ಹಂತ, 2ನೇ ಹಂತ ಹಾಗೂ 3–4 ಹಂತಗಳ ಮಾರ್ಗವಾಗಿ ಸಂಪಿಗೆಹಳ್ಳಿ ಸೇರುವ ರಸ್ತೆಯ ಪ್ರದೇಶವು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿರುತ್ತದೆ ಹಾಗೂ ಸದರಿ ರಸ್ತೆಯ ಮಾರ್ಗದಲ್ಲಿರುವ ಗ್ರಾಮಗಳನ್ನು ಅರ್ಕಾವತಿ ಬಡಾವಣೆ ರಚಿಸಲು ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ. ಮೂಲಭೂತ ಸೌಕರ್ಯ ಕಾಮಗಾರಿಯಾದ ರಸ್ತೆ ಕಾಮಗಾರಿ ಕೈಗೊಳ್ಳಲು ಹಂತ ಹಂತವಾಗಿ ಆರ್ಥಿಕ ಸಂಪನ್ಮೂಲ ಲಭ್ಯತೆಯ ಆಧಾರದ ಮೇಲೆ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು. (ನಕ್ಷೆಯ ಪ್ರತಿಯನ್ನು ಅನುಬಂಧದಲ್ಲಿ ಒದಗಿಸಿದೆ) |
| ಆ) | ಸದರಿ ರಸ್ತೆ ಹಾದು ಹೋಗುವ ಮಾರ್ಗದಲ್ಲಿ ಈಗಾಗಲೇ ಆದರ್ಶ ಗ್ರೀನ್ಸ್ ಅಪಾರ್ಟ್‌ಮೆಂಟ್ ನವರು ಬೇರೆ ದಿಕ್ಕಿಗೆ ರಸ್ತೆಯನ್ನು ತಿರುಗಿಸಿ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡುತ್ತಿರುವುದು ಹಾಗೂ ಖಾಸಗಿ ವ್ಯಕ್ತಿಗಳು ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಮನೆಗಳು, ಅಂಗಡಿ ಮುಂಗಟ್ಟುಗಳು ಮತ್ತು ಬಡಾವಣೆಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಾರ್ವಜನಿಕ ಹಿತದೃಷ್ಟಿಯಲ್ಲಿ ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು? | ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 3 ಮತ್ತು 9 ರಲ್ಲಿನ ಒಟ್ಟು 26 ಎಕರೆ 17 ಗುಂಟೆ ವಿಸ್ತೀರ್ಣದಲ್ಲಿ ಮೆ॥ ಆದರ್ಶ ಹೆವೆನ್ ಪ್ರೈ ಲಿ., ಪರವಾಗಿ ಅನುಮೋದಿತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಸರ್ಕಾರದಿಂದ ಅನುಮೋದಿತ ಮಹಾಯೋಜನೆ RMP–2015 ರ ಪ್ರಕಾರ ಪ್ರಸ್ತಾಪಿತ 18.0 ಮೀ ಅಗಲದ ರಸ್ತೆ ಪಂಕ್ತೀಕರಣವನ್ನು ಅಳವಡಿಸಲಾಗಿರುತ್ತದೆ.<br><br>ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 4&8 ರಲ್ಲಿನ 27ಎ–11ಗುಂಟೆ ಹಾಗೂ ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂ.5 ಮತ್ತು ಅಗ್ರಹಾರ ಗ್ರಾಮದ ಸರ್ವೆ ನಂ. 12 ಮತ್ತು 14 ರಲ್ಲಿನ ಒಟ್ಟು 9 ಎಕರೆ 39.5 ಗುಂಟೆ ವಿಸ್ತೀರ್ಣದಲ್ಲಿನ ಅನುಮೋದಿತ ವಸತಿ ವಿನ್ಯಾಸದಲ್ಲಿ ಅನುಮೋದಿತ ಮಹಾಯೋಜನೆ RMP–2015ರ ಪ್ರಸ್ತಾಪಿತ 18 ಮೀ. ಅಗಲದ ರಸ್ತೆ ಪಂಕ್ತೀಕರಣವನ್ನು ಅಳವಡಿಸಲಾಗಿದೆ.<br><br>ಪ್ರಶ್ನಿತ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯ ವ್ಯಾಪ್ತಿಯಲ್ಲಿದ್ದು, ರಸ್ತೆ ಒತ್ತುವರಿ, ಮನೆಗಳು, ಅಂಗಡಿ ಮುಗ್ಗಟ್ಟುಗಳು ನಿರ್ಮಾಣ ತಡೆಯಲು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ನಅಇ 243 ಬೆಂಆಸೇ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ



KOGILU CROSS
PRAKRUTHI NAGAR
18M RMP ROAD
ADARSHA GREEN
JAYASURYA NAGAR
18M WIDE RMP ROAD
ARKAVATHI LAYOUT
ARKAVATHI LAYOUT